
# ಕರ್ನಾಟಕದಲ್ಲಿ ನಗರಗಳಲ್ಲಿನ ಅರ್ಥವ್ಯವಸ್ಥೆ: ಈ ಅರ್ಥವ್ಯವಸ್ಥೆಯನ್ನು ಹೇಗೆ ಸುಸ್ಥಿರಗೊಳಿಸುವುದು?

ಕಲಾ ಎಸ್ ಶ್ರೀಧರ್[1], ಎಸ್ ಮಾನಸಿ[2] ಮತ್ತು ಎನ್. ಲತಾ[3]







## ಪೀಠಿಕೆ:

ಕರ್ನಾಟಕ ರಾಜ್ಯವು ಭಾರತದಲ್ಲಿ ಅತಿ ನಗರೀಕೃತ ರಾಜ್ಯಗಳ ಪೈಕಿ ೭ನೆಯ ಸ್ಥಾನದಲ್ಲಿದೆ. ಈ ರಾಜ್ಯದ ಒಟ್ಟಾರೆ ಜನಸಂಖ್ಯೆಯ ಪೈಕಿ ಶೇ.೩೮.೬ ರಷ್ಟು ಜನರು ನಗರಗಳಲ್ಲಿ ವಾಸಿಸುತ್ತಿದ್ದಾರೆ. ಈ ಪ್ರಮಾಣವು ರಾಷ್ಟ್ರೀಯ ಸರಾಸರಿಯಾದ ಶೇ.೩೧.೧೬ ಕ್ಕಿಂತ ಸ್ವಲ್ಪಮಟ್ಟಿಗೆ ಹೆಚ್ಚಿಗೆಯೇ ಇದೆ (ಭಾರತದ ೨೦೧೧ರ ಜನಗಣತಿ). ರಾಜ್ಯದಲ್ಲಿ ಒಟ್ಟು ೨೭೭ ನಗರ ಸ್ಥಳೀಯ ಸಂಸ್ಥೆಗಳಿವೆ (ಯುಎಲ್‌ಬಿಗಳು). ಈ ಸಂಸ್ಥೆಗಳು ನಗರ ಸಭೆಗಳನ್ನು ನಗರ ಪರಿಷತ್ತುಗಳನ್ನು, ಪಟ್ಟಣ ಪಂಚಾಯಿತಿಗಳನ್ನು ಮತ್ತು ಪ್ರಕಟಿತ ಪ್ರದೇಶ ಸಮಿತಿಗಳನ್ನು ಒಳಗೊಂಡಿವೆ. ಈ ಸಂಸ್ಥೆಗಳಿಗೆ ಆಸ್ತಿ ತೆರಿಗೆಯೇ ಒಂದು ಮುಖ್ಯ ಆದಾಯದ ಮೂಲವಾಗಿದೆ. ಇದರಿಂದ ಅವುಗಳಿಗೆ ಶೇ.೫೩ ರಷ್ಟು ಆದಾಯವು ದೊರಕುತ್ತದೆ. ಮಹಾರಾಷ್ಟ್ರ, ಗುಜರಾತ್ ಮುಂತಾದ ರಾಜ್ಯಗಳಲ್ಲಿ ಯುಎಲ್‌ಬಿಗಳು ಕರ್ನಾಟಕಕ್ಕೆ ಹೋಲಿಸಿದರ ಗಣನೀಯವಾಗಿ ಇನ್ನೂ ಹೆಚ್ಚಿನ ಅದಾಯುವನ್ನು ತಮ್ಮ ಸ್ವಂತ ಸಂಪನ್ಮೂಲಗಳಿಂದಲೇ ಗಳಿಸುತ್ತವೆ. ಈಗ ಎಲ್ಲೆಡೆಯೂ ಸುಂಕ ವಸೂಲಿಯನ್ನು ರದ್ದು ಪಡಿಸಿರುವುದರಿಂದ ಯುಎಲ್‌ಬಿಗಳು ತಮ್ಮ ಸುಸ್ಥಿರತೆಗಾಗಿ ಇನ್ನೂ ಶಕ್ತಿಯುತ ಆದಾಯದ ಸಂಪನ್ಮೂಲಗಳನ್ನೂ ಹುಡುಕಿಕೊಳ್ಳಬೇಕಾಗಿದೆ ಮತ್ತು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ಅವಲಂಬಿಸಿವುದನ್ನು ಕಡಿಮೆಮಾಡಿಕೊಳ್ಳಬೇಕಾಗಿದೆ.

ನಗರ ಸಭೆಗಳ ಆರ್ಥಿಕತೆಯು ಶಿಥಿಲವಾಗುತ್ತಿರುವ ಈ ಸಂದರ್ಭದವನ್ನೂ ಅಧ್ಯಯನ ಮಾಡುವ ಸಲುವಾಗಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಯಿತು. ಅಧ್ಯಯನಕ್ಕಾಗಿ ರಾಜ್ಯದ ಆಯ್ದ ಯುಎಲ್‌ಬಿಗಳನ್ನು ಆರಿಸಿಕೊಳ್ಳಲಾಯಿತು. ಅವುಗಳು ಈ ರೀತಿ ಇವೆ: ೧. ಹುಬ್ಬಳ್ಳಿ–ಧಾರವಾಡ; ೨. ದಾವಣಗೆರೆ; ೩, ಬೀದರ್; ೪. ಶಿರಾ; ೫. ಯಾದಗೀರ್; ೬. ಚಾಮರಾಜನಗರ; ೭. ಉಲ್ಲಾಳ, ೮. ಬಂಗಾರಪೇಟೆ; ೯. ಕೃಷ್ಣರಾಜನಗರ; ೧೦. ಲಿಂಗಸಗೂರು; ೧೧. ಹಳಿಯಾಳ; ಮತ್ತು ೧೨. ಸಕಲೇಶಪುರ. ವಿಶ್ಲೇಷಣೆಯ ಉದ್ದೇಶಕ್ಕಾಗಿ ಈ ನಗರಗಳ ಸಂಸ್ಥೆಗಳನ್ನು ಮೂರು ಭಾಗಗಳಾಗಿ ವಿಂಗಡಿಸಲಾಯಿತು. ಮೊದಲನೆಯ ಶ್ರೇಣಿಯು ೧ ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಉಳ್ಳದ್ದಾಗಿಯೂ, ಎರಡನೆಯ ಶ್ರೇಣಿಯು ೫೦೦೦೦ ದಿಂದ ೧ ಲಕ್ಷ ಜನಸಂಖ್ಯೆ ಉಳ್ಳದ್ದಾಗಿಯೂ ಮತ್ತು ಮೂರನೆಯ ಶ್ರೇಣಿಯು ೨೦,೦೦೦ ದಿಂದ ೪೯,೯೯೯ ಜನಸಂಖ್ಯೆಯನ್ನು ಹೊಂದಿದ್ದಾಗಿಯೂ ಇತ್ತು. ಈ ರೀತಿಯ ಶ್ರೇಣಿಕರಣವು ಜನಗಣತಿಯ ಸಿದ್ಧಾಂತಕ್ಕೆ ಅನುಗುಣವಾಗಿತ್ತು. ಜೊತೆಗೆ ಶ್ರೇಣಿಕರಣಕ್ಕೆ ಅನುಗುಣವಾಗಿ ನಗರ ಸಭೆಗಳಿಗೆ, ನಗರ ಪರಿಷತ್ತುಗಳಿಗೆ (ಸಿಎಂಸಿ) ಮತ್ತು ಪಟ್ಟಣ ಸಭೆಗಳಿಗೆ (ಟಿಎಮ್‌ಸಿ) ಅನುಗುಣವಾದ ಜನಸಂಖ್ಯೆಗೆ ತಕ್ಕಹಾಗೆ ಇದೆ. ಆದರೆ ಬೀದರ್ ಪಟ್ಟಣವು ಮಾತ್ರ ಸಿಎಂಸಿ ಆಗಿದ್ದರೂ ಸಹ ಜನಗಣತಿಯ ಪ್ರಕಾರ ನಗರ ಸಭೆ ಆಗಲು ಅರ್ಹತೆ ಹೊಂದಿದೆ. ಆದರೆ ಇನ್ನೂ ಅದನ್ನು ನಗರ ಸಭೆಯಾಗಿ ಪರಿವರ್ತಿಸಿಲ್ಲ.

## ಕಾರ್ಯವಿಧಾನ

ಪ್ರಸ್ತುತ ಅದ್ಯಯನವು ಯುಎಲ್‌ಬಿಗಳ ಈಗಿನ ಆದಾಯ ಮೂಲಗಳನ್ನು ಪರೀಕ್ಷಿಸುವ ಕಾರ್ಯವನ್ನಲ್ಲದೆ ಅವುಗಳಿಗೆ ಬೇರೆ ಯಾವ ರೀತಿಯಲ್ಲಿ ಆದಾಯ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸಲಹೆ ನೀಡಬಹುದು ಎಂಬ ಬಗ್ಗೆಯೂ ಚಿಂತನೆ ನಡೆಸಿದೆ. ಈ ಯುಎಲ್‌ಬಿಗಳ ಪೈಕಿ ಎಲ್ಲಾ ೧೨ ಯುಎಲ್‌ಬಿಗಳನ್ನು ೨೦೧೦–೧೧ರಿಂದ ೨೦೧೬–೧೭ರವರೆಗೆ ಲೆಕ್ಕ ಪರಿಶೋಧನೆಯಿಂದ ತಿಳಿದುಬಂದ ಆದಾಯ ಮತ್ತು ಖರ್ಚಿನ ವಿವರಗಳ ಮೂಲಕ ವಿಶ್ಲೇಷಿಸಲಾಯಿತು (ಲಭ್ಯ ದತ್ತಾಂಶದ ಪ್ರಕಾರ). ಆದಾಯಗಳಿಗೆ ಸಾಮರ್ಥ್ಯವನ್ನು ಅಂದಾಜೀಕರಿಸುವ ಸಲುವಾಗಿ ಮೂರು ದೃಶ್ಯಾವಳಿಗಳನ್ನು ಸಿದ್ಧಪಡಿಸಲಾಯಿತು. ಮೊದಲನೆಯ ದೃಶ್ಯಾವಳಿಯು ಚಾಲ್ತಿಯಲ್ಲಿರುವ ಆಸ್ತಿ ತೆರಿಗೆ ದರಗಳನ್ನು ಮಾತ್ರ ಪರಿಗಣಿಸಿತು. ಇದರಲ್ಲಿ ಸರ್ಕಾರಿ ಸ್ವತ್ತನು ಬಿಟ್ಟು ತೆರಿಗೆ ನೀಡದಿರುವ ಹಾಗೂ ಅಂದಾಜೀಕರಿಸಿಲ್ಲದೇ ಇರುವ ಆಸ್ತಿಗಳನ್ನು ಸಹ ಲೆಕ್ಕಕ್ಕೆ ತೆಗೆದುಕೊಳ್ಳಲಾಯಿತು. ಎರಡನೆಯ ದೃಶ್ಯಾವಳಿಯು ಮೊದಲನೆಯ ದೃಶ್ಯಾವಳಿಯ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡಿರುವುದಲ್ಲದೆ ಕೆಲವು ಸಕಾರಿ ಸ್ವತ್ತುಗಳು ವಾಣಿಜ್ಯ ಸಂಕೀರ್ಣಗಳು ಆಗಿರಬಹುದೆಂಬ ದೃಷ್ಟಿಯಿಂದ ಅವುಗಳನ್ನು ಒಳಗೊಂಡಿದೆ. ಉಳಿದಂತೆ ತೆರಿಗೆ ಕಟ್ಟದ ಆಸ್ತಿಗಳಿಗೆ ಸಂಬಂಧಿಸಿದಂತೆ ಚಾಲ್ತಿಯಲ್ಲಿನ ಆಸ್ತಿ ತೆರಿಗೆ ದರಗಳನ್ನು ಉಪಯೋಗಿಸಿಕೊಂಡು ಅವುಗಳಿಂದ ಬರಬಹುದಾದ ಆದಾಯವನ್ನು ಸರಾಸರಿ ಚದರ ಅಡಿ ಲೆಕ್ಕದಲ್ಲಿ ಕಂಡುಹಿಡಿಯಲಾಯಿತು. ಮೊದಲನೆಯ ದೃಶ್ಯಾವಳಿಗಳ ಎಲ್ಲಾ ಅಂಶಗಳನ್ನು ಒಳಗೊಂಡಿದುದರ ಜೊತೆಗೆ ಕರ್ನಾಟಕ ಸರ್ಕಾರದ ನೋಂದಣಿ ಮಹಾನಿರೀಕ್ಷಕರ (ಐಜಿಆರ್) ಶಿಫಾರಿತ ಆಸ್ತಿ ವಡಾಲ್ಯಗಳನ್ನು (ಮಾರುಕಟ್ಟೆ ದರಕ್ಕೆ ಸಮೀಪವಾಗಿಯೇ ಇರುವ) ವಾಸಸ್ಥಳ ಮತ್ತು ವಾಣಿಜ್ಯ ಸ್ವತ್ತುಗಳ ಮೌಲ್ಯವನ್ನು ಲೆಕ್ಕ ಹಾಕಲಾಯಿತು. ಇದೂ ಅಲ್ಲದೆ ನೀರಿನ ಸಂಪರ್ಕಕ್ಕೆ ಮೀಟರುಗಳನ್ನು ಅಳವಡಿಸುವುದರ ಮೂಲಕ ಯುಎಲ್‌ಬಿಗಳಿಗೆ ದೊರಕಬಹುದಾದ ಅಧಿಕ ಆದಾಯವನ್ನೂ ಸಹ ಅಂದಾಜೀಕರಿಸಲಾಯಿತು. ಮೂರನೆಯ ದೃಶ್ಯಾವಳಿಯಲ್ಲಿ ಯುಎಲ್‌ಬಿಗಳ ವ್ಯಾಪ್ತಿಯಲ್ಲಿನ ಅನಧಿಕೃತ ಅಂಗಡಿಗಳಿಂದ ವಾಣಿಜ್ಯ ಪರವಾನಿಗಿ ಶುಲ್ಕವನ್ನು (ದಂಡವೂ ಸೇರಿದಂತೆ) ಲೆಕ್ಕ ಹಾಕಲಾಯಿತು. ಈ ಎಲ್ಲಾ ವಿಶ್ಲೇಷಣೆಗಳ ಮೂಲಕ ಪ್ರಸ್ತುತ ಅಧ್ಯಯನವು ಯುಎಲ್‌ಬಿಗಳ ಚಾಲ್ತಿ ಆರ್ಥಿಕ ಸ್ಥಾನಮಾನಗಳ ಸುಸ್ಥಿರ ನಿರ್ವಹಣೆಗಾಗಿ ಕೆಲವೊಂದು ಕಾರ್ಯನೀತಿ ಶಿಫಾರಸುಗಳನ್ನು ಮಾಡಿದೆ.

---

೧ ಪ್ರಾಧ್ಯಾಪಕರು, ಸಿಆರ್‌ಯುಎ ಕೇಂದ್ರದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು.
೨ ಇದೇ ಕೇಂದ್ರದ ಸಹ ಪ್ರಾಧ್ಯಾಪಕರು
೩ ಇದೇ ಕೇಂದ್ರದ ಸಲಹೆಗಾರರಾಗಿದ್ದಾರೆ.

ಈ ಸಂಶೋಧನಾ ಅಧ್ಯಯನವನ್ನು ಕರ್ನಾಟಕ ಸರ್ಕಾರದ ನಗರಾಡಳಿತ ನಿರ್ದೇಶನಾಲಯ ಹಾಗೂ ಕರ್ನಾಟಕದ ನಗರ ವ್ಯವಸ್ಥಾಪಕರ ಸಂಘದ (ಸಿಎಂಎಕೆ) ಧನಸಹಾಯದಿಂದ ಕೈಗೊಳ್ಳಲಾಗಿದೆ. ನಗರಾಡಳಿತ ನಿರ್ದೇಶನಾಲಯದ ಆಗಿನ ಆಯುಕ್ತರಾಗಿದ್ದ ಡಾ. ಆರ್ ವಿಶಾಲ್, ಭಾ.ಆ.ಸೇ. ರವರನ್ನು ಮತ್ತು ಸಿಎಂಎ ಸಂಘದ ಪ್ರಧಾನ ಕಾರ್ಯದರ್ಶಿಗಳನ್ನು ಅವರುಗಳು ಸತತವಾಗಿ ನೀಡಿದ ಬೆಂಬಲಕ್ಕಾಗಿ ಈ ಮೂಲಕ ವಂದಿಸಲಾಗುತ್ತದೆ. ಜೊತೆಗೆ ಸಿಎಂಎಕೆ ಸಂಘದ ಸಿಬ್ಬಂಧಿ ವರ್ಗವನ್ನು ಮತ್ತು ಅಧ್ಯಯನ ನಡೆಸಲಾದ ೧೨ ಸ್ಥಳೀಯ ಸಂಸ್ಥೆಗಳ ಸಿಬ್ಬಂಧಿ ವರ್ಗವನ್ನು ಅವರುಗಳು ನೀಡಿದ ಸಹಕಾರ ಮತ್ತು ನೀಡಿದ ಅಮೂಲ್ಯ ಮಾಹಿತಿಗಳಿಗಾಗಿ ವಂದಿಸಲಾಗುತ್ತಿದೆ.

ಸಂಪಾದಕರು:
ಎಸ್. ಮಾನಸಿ

## ಮುಖ್ಯ ಫಲಿತಾಂಶಗಳು

ಮೊದಲನೆಯದಾಗಿ ಯುಎಲ್‌ಬಿಗಳ ಅರ್ಥವ್ಯವಸ್ಥೆಯಲ್ಲಿ ಈಚಿನ ದಿನಗಳಲ್ಲಿ ಕಂಡುಬರುವ ಪ್ರವೃತ್ತಿಯನ್ನು ಚರ್ಚಿಸಲಾಗಿದೆ. ಈ ಅರ್ಥವ್ಯವಸ್ಥೆಯು ಯುಎಲ್‌ಬಿಗಳ ಒಟ್ಟಾರೆ ಸಂಪನ್ಮೂಲಗಳು ಮತ್ತು ಆಧಾಯಗಳು ಮತ್ತು ಆಸ್ತಿ ತೆರೆಗೆಯಿಂದ ಬರುವ ಆಧಾಯ, ಬಳಕೆದಾರರ ಶುಲ್ಕಗಳು ನಗರ ಸಭೆಗಳ ಸ್ವತ್ತುಗಳಿಂದ ಬರುವ ಬಾಡಿಗೆ ಇತ್ಯಾದಿಗಳನ್ನು ಒಳಗೊಂಡಿದೆ. ಪ್ರಸ್ತುತ ಅಧ್ಯಯನವು ರಾಜ್ಯದ ವಿವಿಧ ವರ್ಗದ ಮತ್ತು ಗಾತ್ರದ ಆಯ್ದ ನಗರಗಳ ಅರ್ಥವ್ಯವಸ್ಥೆಯನ್ನು ಈ ರೀತಿ ವಿಶ್ಲೇಷಿಸಿದೆ. ಜೊತೆಗೆ ಪ್ರತಿಯೊಂದು ಆದಾಯ ಮೂಲಗಳಿಂದಲೂ ತಲೆಯೊಂದಕ್ಕೆ ಸಿಗುವ ಆದಾಯದ ಪ್ರವೃತ್ತಿಯನ್ನು ಕಂಡುಹಿಡಿಯಲಾಗಿದೆ. ಈ ಮೂಲಕ ಗಾತ್ರಕ್ಕೂ ಮತ್ತು ಆದಾಯಕ್ಕೂ ಇರುವ ಸಂಬಂಧಗಳು ಮತ್ತು ಅವುಗಳ ನಿಯಂತ್ರಣವನ್ನು ಲೆಕ್ಕ ಹಾಕಲಾಗಿದೆ. ಸುಸ್ಥಿರತೆಯ ದೃಷ್ಟಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಆಗುವ ಹಣ ವರ್ಗಾವಣೆಯ ಬಗ್ಗೆ ಅಧ್ಯಯನಕಾರರು ಪರಿಶೀಲಿಸಿಲ್ಲ.

ಮೇಲೆ ಹೇಳಿದ ಪ್ರಕಾರ ೧೨–೨೦೧೧ರ ಸಾಲಿನಿಂದ ೧೮–೨೦೧೭ರ ಸಾಲಿನವರೆಗೆ ಇದ್ದ ಪ್ರವೃತ್ತಿಯನ್ನು ಗಮನಿಸಿದಾಗ ಆದಾಯದ ಹೆಚ್ಚಳವು ಮೊದಲನೆಯ ವರ್ಗದಲ್ಲಿ ಹುಬ್ಬಳ್ಳಿ–ಧಾರವಾಡ ಮತ್ತು ಬೀದರ್ ನಗರ ಸಭೆಗಳಲ್ಲಿ ಕಂಡು ಬಂದಿತು. ಆದರೆ ದಾವಣಗೆರೆಯಲ್ಲಿ ಇದು ಇಳಿಮುಖವಾಗಿತ್ತು. ಎರಡನೆಯ ದರ್ಜೆ ನಗರಗಳಲ್ಲಿ ತಲೆಯೊಂದರ ಆದಾಯವು ಇಳಿಮುಖವಾಗಿದ್ದರೂ ಸಹ ಚಾಮರಾಜನಗರದಲ್ಲಿ ಇದು ಏರಿಕೆ ಪ್ರವೃತ್ತಿಯನ್ನು ತೋರಿಸಿತ್ತು. ಶಿರಾ ನಗರ ಸಭೆಯು ೨೦೧೬–೧೭ರ ಸಾಲಿನಲ್ಲಿ ತಲೆಯೊಂದಕ್ಕೆ ೪೭೩ ರೂಗಳ ಸ್ವಂತ ಸಂಪನ್ಮೂಲ ಆದಾಯವನ್ನು ಗಳಿಸಿ ಅತಿಹೆಚ್ಚಿನ ಸಾಧನವನ್ನು ಗಳಿಸಿತು. ಮೊದಲನೆಯ ದರ್ಜೆಯ ನಗರ ಸಭೆಗೆ ಸಂಬಂಧಿಸಿದಂತೆ ಹೇಳುವುದಾದರೆ ಕೃಷ್ಣರಾಜನಗರವು ಸಕಾರಾತ್ಮಕ ಪ್ರವೃತ್ತಿಯನ್ನು ತೋರಿಸಿತು. ಸಕಲೇಶಪುರ ನಗರವು ೧೬–೨೦೧೫ರ ಸಾಲಿನಲ್ಲಿ ತಲೆಯೊಂದಕ್ಕೆ ೯೮೦ ರೂ ಆದಾಯವನ್ನು ಗಳಿಸಿ ಭರವಸೆಯನ್ನು ಹುಟ್ಟಿಸಿತ್ತು. ಆದರೆ ಬೆಂಗಳೂರಿಗೆ ಭೌಗೋಳಿಕವಾಗಿ ಸಮೀಪವಿರುವ ಬಂಗಾರಪೇಟೆಯಲ್ಲಿ ಹಾಗೂ ಉತ್ತರ ಕರ್ನಾಟಕದ ಲಿಂಗಸೂರಿನಲ್ಲಿ ಅತಿ ಕಡಿಮೆ ಮಟ್ಟದ ತಲೆಯೊಂದರ ಆದಾಯ (ರೂ ೬೯ ಮತ್ತು ೨೧೯), ೨೦೧೬–೧೭ರ ಸಾಲಿನಲ್ಲಿ ಕಂಡು ಬಂದಿತು. ಹಾಗೆ ನೋಡಿದರೆ ಈ ನಗರಗಳು ಯಾವಾಗಲೂ ಅತಿ ಕಡಿಮೆ ಆದಾಯವನ್ನೇ ಗಳಿಸುತ್ತಾ ಹಿಂದೆ ಬಿದ್ದಿವೆ. ಸಕಲೇಶಪುರ ನಗರವು ಮೊದಲನೆಯ ದರ್ಜೆಯದ್ದಾಗಿದ್ದರೂ ಸಹ ಎಲ್ಲಾ ಸ್ವಂತ ಸಂಪನ್ಮೂಲಗಳ ಆದಾಯಕ್ಕೆ ಸಂಬಂಧಿಸಿದಂತೆ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯನ್ನು ಸರಿಗಟ್ಟಿತು. ಒಟ್ಟಾರೆ ಹೇಳುವುದಾದರೆ ತಲೆಯೊಂದರ ಎಲ್ಲಾ ಸ್ವಂತ ಸಂಪನ್ಮೂಲ ಆದಾಯವನ್ನು ಗಮನಿಸಿದಾಗ ಮೊದಲನೆಯ ದರ್ಜೆಯ ನಗರಗಳು ಅತ್ಯುತ್ತಮ ಕಾರ್ಯದಕ್ಷತೆಯನ್ನು ತೋರಿದ್ದವು ಮತ್ತು ನಂತರದ ಸ್ಥಾನದಲ್ಲಿ ಎರಡನೆಯ ದರ್ಜೆಯ ನಗರಗಳ ಬದಲಾಗಿ ಮೊದಲನೆಯ ದರ್ಜೆ ನಗರಗಳು ಬಂದಿದ್ದವು.

ಆಸ್ತಿ ತೆರೆಗೆಯಿಂದ ಆದಾಯಗಳಿಸುವುದಕ್ಕೆ ಸಂಬಂಧಿಸಿದಂತೆ ಹಲವಾರು ವರ್ಷಗಳಿಂದ ಮೊದಲನೆಯ ದರ್ಜೆಯ ನಗರಗಳಾದ ಹುಬ್ಬಳ್ಳಿ–ಧಾರವಾಡ ಹಾಗೂ ಬೀದರ್ ಇವುಗಳು ಮಂಚೂಣಿಯಲ್ಲಿವೆ. ಎರಡನೆಯ ದರ್ಜೆಯ ನಗರಗಳ ಪೈಕಿ ಶಿರಾ ನಗರವು ಮೊದಲನೆಯದಾಗಿದೆ. ಮೊದಲನೆಯ ದರ್ಜೆಯ ನಗರಗಳ ಪೈಕಿ ೧೭–೨೦೧೬ರ ಸಾಲಿನಲ್ಲಿ ಕೃಷ್ಣರಾಜನಗರವು ಮೊದಲನೆಯ ಸ್ಥಾನದಲ್ಲಿದ್ದು ಬಂಗಾರಪೇಟೆ ನಗರವು ಕಡೆಯ ಸ್ಥಾನದಲ್ಲಿತ್ತು. ಈ ರೀತಿಯಾಗಿ ಆಸ್ತಿ ತೆರಿಗೆ ಆದಾಯಕ್ಕೆ ಸಂಬಂಧಿಸಿದಂತೆಯೂ ಮೊದಲನೆಯ ದರ್ಜೆ ನಗರಗಳೇ ಮುಂಚೂಣಿಯಲ್ಲಿದ್ದವು. ಉಳಿದಂತೆ ಮೊದಲನೆಯ ದರ್ಜೆಯ ನಗರಗಳು ಎರಡನೆಯ ಸ್ಥಾನದಲ್ಲಿಯೂ ಮತ್ತು ಎರಡನೆಯ ದರ್ಜೆಯ ನಗರಗಳು ಮೊದಲನೆಯ ಸ್ಥಾನದಲ್ಲಿಯೂ ಇದ್ದವು.




ಬಳಕೆದಾರ ಶುಲ್ಕಗಳು ಯುಎಲ್‌ಬಿಗಳ ಗಾತ್ರಕ್ಕೆ ನೇರವಾಗಿ ಸಂಬಂಧಿಸಿದ್ದವು. ಈ ವಿಷಯದಲ್ಲಿ ಹುಬ್ಬಳ್ಳಿ–ಧಾರವಾಡವು ೨೦೬೧–೧೭ರ ಸಾಲಿನಲ್ಲಿ ಮುಂಚೂಣಿಯಲ್ಲಿತ್ತು ಮತ್ತು ನಂತರದ ಸ್ಥಾನದಲ್ಲಿ ಮೂರನೆಯ ಸ್ಥಾನದಲ್ಲಿ ಹಳಿಯಾಳ ನಗರವು ಇತ್ತು. ಬಳಕೆ ಶುಲ್ಕದ ಆದಾಯ ವಸೂಲಿ ಪ್ರವೃತ್ತಿಯೂ ಸಹ ಇತರೆ ಎಲ್ಲಾ ಆದಾಯಗಳು ಮತ್ತು ಆಸ್ತಿ ತೆರಿಗೆ ಆದಾಯದಂತೆಯೇ ತನ್ನ ಪ್ರವೃತ್ತಿಯನ್ನು ತೋರ್ಪಡಿಸಿತು. ಇಲ್ಲಿ ಗಮನಿಸಬಹುದಾದ ಸಂಗತಿಯೇನೆಂದರೆ ದೊಡ್ಡ ನಗರಗಳಲ್ಲಿ ಆಸ್ತಿ ತೆರೆಗೆಯು ಮುಖ್ಯ ಆದಾಯ ಮೂಲವಾಗಿದ್ದರೂ ಸಹ ಸಣ್ಣ ನಗರಗಳಲ್ಲಿ ಬಳಕೆ ಶುಲ್ಕವು ಮುಖ್ಯ ಆದಾಯ ಮೂಲವಾಗಿತ್ತು. ಯುಎಲ್‌ಬಿಗಳ ಆದಾಯ ಮೂಲಗಳ ಪೈಕಿ ನಗರ ಸಭೆ ಕಟ್ಟಡಗಳು ಮತ್ತು ನಾಗರಿಕ ಸೌಲಭ್ಯ ಸಮುಚ್ಚಯಗಳಿಂದ ದೊರೆತ ಬಾಡಿಗೆಯು ಗಣನೀಯ ಪ್ರಮಾಣದಲ್ಲಿತ್ತು. ಹುಬ್ಬಳ್ಳಿ–ಧಾರವಾಡ ನಗರ ಸಭೆಯು ಮಾತ್ರ ತಲೆಯೊಂದಕ್ಕೆ ೯೮ ರೂಗಳ ಆದಾಯವನ್ನು ಈ ಬಾಬ್ತಿನಲ್ಲಿ ಪಡೆಯಲು ಸಮರ್ಥವಾಯಿತು. ಉಳಿದ ಎರಡು ಮೊದಲನೆಯ ದರ್ಜೆಯ ನಗರಗಳು ಈ ರೀತಿ ಮಾಡಲು ಸಮರ್ಥವಾಗಲಿಲ್ಲ. ಎರಡನೆಯ ದರ್ಜೆ ನಗರಗಳ ಪೈಕಿ ತೀರ ಪ್ರದೇಶದಲ್ಲಿನ ನಗರವಾದ ಉಲ್ಲಾಳವು ತಲೆಯೊಂದಕ್ಕೆ ೫೬ ರೂಗಳನ್ನು ಮತ್ತು ಮೂರನೆಯ ದರ್ಜೆ ನಗರವಾದ ಕೃಷ್ಣರಾಜ ನಗರವು ತಲೆಯೊಂದಕ್ಕೆ ೩೪೩ ರೂಗಳನ್ನು (ಹುಬ್ಬಳ್ಳಿ–ಧಾರವಾಡಕ್ಕಿಂತ ಮೂರು ಪಟ್ಟು ಜಾಸ್ತಿ) ೨೦೧೬–೧೭ರ ಸಾಲಿನಲ್ಲಿ ಗಳಿಸಲು ಸಮರ್ಥವಾದವು. ಕೃಷ್ಣರಾಜನಗರವು ತನ್ನ ಸ್ವಂತ ಸಂಪನ್ಮೂಲದಿಂದ ಗಳಿಸಿದ ಬಾಡಿಗೆ ಬಾಬ್ತು ಶೇ.೩೮ ರಷ್ಟು ಇದ್ದಿತು. ಆದರೆ ದೊಡ್ಡ ನಗರಗಳು ಈ ಬಾಬ್ತಿನಲ್ಲಿ ಶೇ.೧೦ ರಷ್ಟನ್ನು ಗಳಿಸಲು ಸಾಧ್ಯವಾಗಲಿಲ್ಲ. ಇದರಿಂದ ವ್ಯಕ್ತವಾಗುವುದೇನೆಂದರೆ ಬಾಡಿಗೆಯನ್ನು ಒಂದು ಪ್ರಧಾನ ಆರ್ಥಿಕ ಮೂಲವಾಗಿ ಗಳಿಸಲು ಮೂರನೆಯ ದರ್ಜೆಯ ನಗರಗಳಿಗೆ ಮಾತ್ರ ಸಾಧ್ಯವಾಗಿದೆ ಎಂಬುದಾಗಿದೆ.

ಯುಎಲ್‌ಬಿಗಳಿಗೆ ತೆರೆಗೆಯೇತರ ಆದಾಯಗಳ ಪೈಕಿ ವ್ಯಾಪಾರ ಪರವಾನಿಗೆ ಶುಲ್ಕ ಮುಖ್ಯ ವಾಗಿದೆ. ಈಚಿನ ಹಲವಾರು ವರ್ಷಗಳಿಂದ ಮೊದಲನೆಯ ದರ್ಜೆಯ ನಗರಗಳು ತಲೆಯೊಂದರ ವ್ಯಾಪಾರ ಪರವಾನಿಗಿ ಆದಾಯವನ್ನು ಸತತವಾಗಿ ಹೆಚ್ಚಿಸಿಕೊಳ್ಳುತ್ತಿದ್ದರೂ ಸಹ ಎರಡನೆಯ ದರ್ಜೆಯ ನಗರಗಳು ಇದರಲ್ಲಿ ಹಿಂದೆ ಬಿದ್ದಿವೆ. ಹಾಗೆ ನೋಡಿದರೆ ಇವುಗಳ ಮೊದಲನೆಯ ದರ್ಜೆಯ ನಗರಗಳಿಗಿಂತ ಹೆಚ್ಚಿನ ಪರವಾನಿಗೆ ಶುಲ್ಕ ವಸೂಲಿ ಮಾಡುತ್ತಿವೆ. ಶಿರಾ ನಗರವೊದು ಇದಕ್ಕೆ ಅಪವಾದವಾಗಿದೆ. ಮೂರನೆಯ ದರ್ಜೆಯ ನಗರಗಳ ಪೈಕಿ ಈ ಶುಲ್ಕ ವಸೂಲಾತಿಯ ಭರವಸೆಯನ್ನು ಹುಟ್ಟಿಸುತ್ತಿದೆ (ಸಕಲೇಶಪುರವನ್ನು ಹೊರತುಪಡಿಸಿ. ಶುಲ್ಕದಿಂದ ಬರುವ ಆದಾಯ ಪ್ರಮಾಣವನ್ನು ಗಮನಿಸಿದಾಗ ಎರಡನೆಯ ದರ್ಜೆಯ ನಗರಗಳು ಅತಿಹೆಚ್ಚಿನ ಶುಲ್ಕವನ್ನು, ಮೊದಲನೆಯ ಮತ್ತು ಮೂರನೆಯ ದರ್ಜೆನಗರಗಳು ಅವಕ್ಕಿಂತ ಕಡಿಮೆ ಪ್ರಮಾಣದಲ್ಲೂ ಶುಲ್ಕವನ್ನು ಪಡೆಯುತ್ತಿವೆ.

ಈ ಬಗ್ಗೆ ಸಾರಾಂಶ ರೂಪದಲ್ಲಿ ಹೇಳುವುದಾದರೆ ಸ್ವಂತ ಸಂಪನ್ಮೂಲಗಳ ಆದಾಯ, ಆಸ್ತಿ ತೆರಿಗೆ ಆದಾಯ ಮತ್ತು ಬಳಕೆದಾರರ ಶುಲ್ಕ ಆದಾಯ ಇವುಗಳಿಗೆ ಸಂಬಂಧಿಸಿದಂತೆ ಮೊದಲ ಹಾಗೂ ಮೂರನೆಯ ದರ್ಜೆ ನಗರಗಳು ಮುಂಚೂಣಿಯಲ್ಲಿದ್ದವು. ಬಾಡಿಗೆಯ ವಿಷಯದಲ್ಲಿ ಮೂರನೆಯ ದರ್ಜೆಯ ನಗರಗಳು ಭರವಸೆ ಹುಟ್ಟಿಸಿದ್ದವು. ಎರಡನೆಯ ದರ್ಜೆ ನಗರಗಳು ವ್ಯಾಪಾರ ಪರವಾನಿಗೆ ಶುಲ್ಕಕ್ಕೆ ಸಂಧಿಸಿದಂತೆ ಮೇಲಿನ ಶ್ರೇಣಿಯಲ್ಲಿದ್ದವು.

## ಯುಎಲ್‌ಬಿಗಳ ಹೆಚ್ಚುವರಿ ಆದಾಯಗಳಿಗೆ ಸಾಮರ್ಥ್ಯ

ಮೊದಲನೆಯ ದೃಶ್ಯಾವಳಿಯು ಆಸ್ತಿತೆರಿಗೆ ದರಗಳನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡು ಸರ್ಕಾರಿ ಆಸ್ತಿಯನ್ನು ಹೊರತುಪಡಿಸಿ ತೆರೆಗೆ ಸಲ್ಲಿಸದ ಹಾಗೂ ಮೌಲ್ಯೀಕರಿಸಲಾಗಿಲ್ಲದ ಆಸ್ತಿಗಳನ್ನೂ ಸಹ ಗಣನೆಗೆ ತೆಗೆದುಕೊಂಡಿತ್ತು. ಆ ಪ್ರಕಾರ ಹುಬ್ಬಳ್ಳಿ–ಧಾರವಾಡ ನಗರವು ೩೭.೩೨ ಕೋಟಿ ರೂಗಳ ಹೆಚ್ಚುವರಿ ಆದಾಯವನ್ನು ಗಳಿಸಲು ಸಾಧ್ಯವಾಗಿತು. ದಾವಣಗೆರೆ ನಗರವು ೩.೨೨ ಕೋಟಿ

ರೂಗಳನ್ನು ಹಾಗೂ ಬೀದರ್ ನಗರವು ೧.೦೯ ಕೋಟಿ ರೂಗಳನ್ನು ಗಳಿಸಿದವು. ಎರಡನೆಯ ದರ್ಜೆಯ ನಗರಗಳ ಪೈಕಿ ಯಾದ್‌ಗೀರ್ ನಗರದ ಗಳಿಕೆ ಸಾಮರ್ಥ್ಯವು ಗಣನೀಯವಾಗಿ ಹೆಚ್ಚಾಗಿ ೬೫ ಲಕ್ಷರೂಗಳನ್ನು ಅದು ಗಳಿಸಿತು. ಈ ಪೈಕಿ ಅಂದಾಜೀಕರಿಸಿಲ್ಲದ ಆಸ್ತಿಗಳಿಂದಲೇ ೫೪.೫೪ ಲಕ್ಷರೂಗಳನ್ನು ಗಳಿಸಲು ಸಾಧ್ಯವಾಗಿದ್ದರಿಂದ ಪ್ರಸ್ತುತ ಆದಾಯದ ಮಟ್ಟಕ್ಕಿಂತ ಅದು ೦.೪೬ ರಷ್ಟು ಹೆಚ್ಚಿನ ಆದಾಯಗಳಿಸಲು ಸಾಧ್ಯವಾಗಿಯಿತು. ಅಧ್ಯಯನಕಾರರು ಮಾಡಿರುವ ವಿಶ್ಲೇಷಣೆಯ ಪ್ರಕಾರ ಉಲ್ಲಾಳ ನಗರದಲ್ಲಿ ತೆರಿಗೆ ಸಲ್ಲಿಸದ ಆಸ್ತಿಗಳಿಂದಲೇ ಕನಿಷ್ಟ ಪಕ್ಷ ೧.೯೨ ಲಕ್ಷ ರೂಗಳ ಆದಾಯ ಬರುವ ನಿರೀಕ್ಷೆಯಿದೆ. ಮೂರನೆಯ ದರ್ಜೆ ನಗರಗಳ ಪೈಕಿ ಈ ದಿಶೆಯಲ್ಲಿ ಕೃಷ್ಣರಾಜನಗರವು ೧ ಕೋಟಿ ರೂಗಳ ಆದಾಯ ಗಳಿಸಿದೆ. ನಂತರದ ಸ್ಥಾನದಲ್ಲಿ ಬಂಗಾರಪೇಟೆ ಇದೆ (ಪಟ್ಟಿ ೧).

ದೃಶ್ಯಾವಳಿ ಎರಡರಲ್ಲಿ ಮೊದಲನೆಯ ದೃಶ್ಯಾವಳಿಯ ಎಲ್ಲಾ ಅಂಶಗಳು ಸೇರಿದ್ದರೂ, ಜೊತೆಯಲ್ಲಿ ಸರ್ಕಾರಿ ಆಸ್ತಿಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ. ಇದಕ್ಕೆ ಕಾರಣವೇನೆಂದರೆ ಕೆಲವು ಸರ್ಕಾರಿ ಆಸ್ತಿಗಳು ವಾಣಿಜ್ಯೀಕರಣವಾಗಿರುವುದು. ಈ ದೃಶ್ಯಾವಳಿಯಲ್ಲಿ ಸರ್ಕಾರಿ ಆಸ್ತಿಗಳನ್ನು ತೆರಿಗೆಹಾಕಬಹುದಾದ ಸ್ವತ್ತುಗಳಾಗಿ ಪರಿಗಣಿಸಲಾಗಿದೆ. ಆ ಪ್ರಕಾರ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ೩೭.೩೮ ಕೋಟಿ ರೂಗಳ ಹೆಚ್ಚುವರಿ ಆದಾಯವನ್ನು ಗಳಿಸಿ ಮೊದಲ ಸ್ಥಾನವನ್ನು ಗಳಿಸಿತು. ನಂತರದ ಸ್ಥಾನಗಳಲ್ಲಿ ದಾವಣಗೆರೆ ಮತ್ತು ಬೀದರ್ ನಗರಗಳು ಇದ್ದು ಅನುಕ್ರಮವಾಗಿ ೩.೨೩ ಕೋಟಿ ರೂಗಳನ್ನು ಗಳಿಸಿದವು. ಎರಡನೆಯ ದರ್ಜೆಯ ನಗರಗಳ ಪೈಕಿ ಯಾದಗೀರ್ ನಗರವು ೨.೦೬ ಲಕ್ಷ ರೂಗಳ ಹೆಚ್ಚುವರಿ ಗಳಿಕೆಯನ್ನು ಕಂಡಿದ್ದು, ನಂತರದ ಸ್ಥಾನದಲ್ಲಿ ೧ ಲಕ್ಷಕ್ಕೂ ಸ್ವಲ್ಪ ಕಡಿಮೆ ಆದಾಯವನ್ನು ಗಳಿಸಿದ ಚಾಮರಾಜನಗರವು ಇದ್ದಿತು. ಮೂರನೆಯ ದರ್ಜೆ ನಗರಗಳ ಪೈಕಿ ಕೃಷ್ಣರಾಜನಗರವು ೧ ಲಕ್ಷಕ್ಕೂ ಸ್ವಲ್ಪ ಕಡಿಮೆ ಹೆಚ್ಚುವರಿ ಆದಾಯವನ್ನು ಗಳಿಸಿ ಮೊದಲನೆಯ ಸ್ಥಾನದಲ್ಲಿತ್ತು ಮತ್ತು ನಂತರದ ಸ್ಥಾನದಲ್ಲಿ ಸಕಲೇಶಪುರವು ಇದ್ದಿತು. ಈ ದೃಷ್ಟಿಯಿಂದ ನೋಡುವುದಾದರೆ ಸರ್ಕಾರಿ ಆಸ್ತಿಗಳು ಜಾಸ್ತಿ ಸಂಖ್ಯೆಯಲ್ಲಿದ್ದರೂ ಸಹ ಅವುಗಳಿಂದ ಬರುವ ಆದಾಯವು ಕಡಿಮೆಯಾಗಿಯೇ ಇದೆ (ಪಟ್ಟಿ ೧).

ಮೂರನೆಯ ದೃಶ್ಯಾವಳಿಯು ಮಾರುಕಟ್ಟೆ ದರಕ್ಕೆ ಸಮೀಪವಿರುವ ಆಸ್ತಿ ಮೌಲ್ಯಗಳನ್ನು (ವಾಸಸ್ಥಳಗಳು ಮತ್ತು ವಾಣಿಜ್ಯ ಸ್ಥಳಗಳು), ಬಳಸುವ ನೀರಿಗೆ ಮೀಟರ್ ಅಳವಡಿಕೆಯನ್ನು ಹಾಗೂ ಅನಧಿಕೃತ ಅಂಗಡಿಗಳಿಂದ ವ್ಯಾಪಾರ ಪರವಾನಿಗೆ ಶುಲ್ಕ ವಸೂಲಾತಿಯನ್ನು ಗಣನೆಗೆ ತೆಗೆದುಕೊಂಡಿದೆ. ಮೊದಲನೆಯ ದರ್ಜೆ ನಗರವಾದ ಹುಬ್ಬಳ್ಳಿ–ಧಾರವಾಡವು ಆಸ್ತಿ ತೆರಿಗೆಯಿಂದ ೨೪೭ ಕೋಟಿ ರೂಗಳನ್ನು ಗಳಿಸಿದ್ದು (ಚಾಲ್ತಿಯಲ್ಲಿದ್ದ ಆದಾಯಕ್ಕಿಂತ ೪.೪ ಪಟ್ಟು ಹೆಚ್ಚು), ಈ ನಗರಗಳ ಪೈಕಿ ದಾವಣೆಗೆರೆಯು ಕೇವಲ ೨೩ ಕೋಟಿ ರೂಗಳ ಆದಾಯವನ್ನು ಗಳಿಸಿತು (ಚಾಲ್ತಿ ಆದಾಯಕ್ಕಿಂತ ೦.೧೭ ಪಟ್ಟು ಹೆಚ್ಚು). ಬೀದರ್ ನಗರವು ೧೫ ಕೋಟಿ ರೂಗಳನ್ನು ಗಳಿಸಿತು (ಚಾಲ್ತಿ ಆದಾಯಕ್ಕಿಂತ ೩.೫ ಹೆಚ್ಚು). ಎರಡನೆಯ ನಗರಗಳ ದರ್ಜೆಯ ಪೈಕಿ ಚಾಮರಾಜನಗರವು ೪ ಕೋಟಿ ರೂಗಳನ್ನು ಮತ್ತು ಶಿರಾ ೨.೧೨ ಕೋಟಿ ರೂಗಳನ್ನು ಗಳಿಸಿತು (೧.೬ ಪಟ್ಟು ಹೆಚ್ಚು). ಮೂರನೆಯ ದರ್ಜೆಯ ನಗರಗಳ ಪೈಕಿ ಬಂಗಾರಪೇಟೆ ನಗರವು ೬.೧೧ ಕೋಟಿ ರೂಗಳನ್ನು (೬ ಪಟ್ಟು ಹೆಚ್ಚು) ಗಳಿಸಿದ್ದು, ಕೃಷ್ಣರಾಜನಗರವು ೪.೫೫ ಕೋಟಿ ರೂಗಳನ್ನು ಗಳಿಸಿತು (೪.೬ ಪಟ್ಟು ಹೆಚ್ಚು) (ಪಟ್ಟಿ ೧). ಸಕಲೇಶಪುರ ನಗರವು ೩ ಕೋಟಿ ರೂಗಳನ್ನು ಗಳಿಸಿತು (೪.೪. ಪಟ್ಟು ಹೆಚ್ಚು).

## ಬಳಸುವ ನೀರಿಗೆ ಮೀಟರ್ ಅಳವಡಿಸಿದ್ದರಿಂದ ಬಂದ ಆದಾಯ

ಹುಬ್ಬಳ್ಳಿ–ಧಾರವಾಡ ಹಾಗೂ ಹಳಿಯಾಳಗಳಲ್ಲಿ ಪ್ರಸ್ತುತದಲ್ಲಿ ಪ್ರತಿ ಕಿಲೋ ಲೀಟರ್ ನೀರಿಗೆ ೧೩ ರೂಗಳು ಮತ್ತು ೧೫ ರೂಗಳನ್ನು ವಸೂಲು ಮಾಡಲಾಗುತ್ತಿದೆ. ಅಧ್ಯಯನಕಾರರು ಎಲ್ಲಾ ನೀರಿನ ಸಂಪರ್ಕಗಳಿಗೆ ಮೀಟರನ್ನು ಅಳವಡಿಸುವುದರಿಂದ ಬರಬಹುದಾದ ಆದಾಯವನ್ನು ಲೆಕ್ಕ ಹಾಕಿದ್ದಾರೆ. ಆ ಪ್ರಕಾರ ಕಂಡು ಬಂದ ಆಶ್ಚರ್ಯಕರ ಸಂಗತಿಯೇನೆಂದರೆ ಇದರಿಂದ ದೊರೆಯುವ ಆದಾಯವು ಸಹ ಆದಾಯ ತೆರಿಗೆ ಆದಾಯದಷ್ಟು ಆಗಿರುತ್ತದೆ ಎಂಬುದಾಗಿದೆ. ಲೆಕ್ಕ ಹಾಕಿದ ಪ್ರಕಾರ ಹುಬ್ಬಳ್ಳಿ–ಧಾರವಾಡಕ್ಕೆ ಹೆಚ್ಚುವರಿಯಾಗಿ ೩೮ ಕೋಟಿ ರೂಗಳು, ದಾವಣಗೆರೆಗೆ ೫.೭ ಕೋಟಿ ರೂಗಳು ಮತ್ತು ಬೀದರ್‌ಗೆ ೨.೪ ಕೋಟಿ ರೂಗಳು ದೊರೆಯುತ್ತದೆ. ಈ ಮೊತ್ತಗಳು ೨೦೦೬–೦೭ರ ಸಾಲಿನಲ್ಲಿ ಆ ನಗರಗಳಿಗೆ ಸ್ವಂತ ಸಂಪನ್ಮೂಲಗಳಿಂದ ದೊರೆಯುವ ಆದಾಯದ ಶೇ.೨೫ ರಷ್ಟಾಗಿದ್ದವು.

**ಪಟ್ಟಿ ೧: ವಿವಿಧ ದೃಶ್ಯಾವಳಿಗಳನ್ನು ಗಣನೆಗೆ ತೆಗೆದುಕೊಂಡು ವಿವಿಧ ದರ್ಜೆಯ ನಗರಗಳಿಗೆ ಬರಬಹುದಾದ ಹೆಚ್ಚುವರಿ ಆದಾಯಗಳಿಕೆ**

| ನಗರಗಳು | ಆಸ್ತಿ ತೆರಿಗೆಯಿಂದ ಬರುವ ಆದಾಯ ಕೋಟಿ ರೂಗಳಲ್ಲಿ | | | ನಗರ ಸಭೆಗೆ ಸೇರಿದ ಕಟ್ಟಡಗಳಿಂದ ಬರುವ ಆದಾಯ (ಕೋಟಿ ರೂ.) | ನೀರಿನ ಶುಲ್ಕದಿಂದ ಬರುವ ಆದಾಯ (ಕೋಟಿ ರೂ.) | ವ್ಯಾಪಾರ ಪರವಾನಿಗೆಯಿಂದ ಬರುವ ಆದಾಯ (ಕೋಟಿ ರೂ.) |
|---|---|---|---|---|---|---|
| | ದೃಶ್ಯಾವಳಿ–೧ | ದೃಶ್ಯಾವಳಿ –೨ | ದುಶ್ಯಾವಳಿ–೩ | | | |
| **ಮೊದಲ ದರ್ಜೆ ನಗರಗಳು** | | | | | | |
| ಹುಬ್ಬಳ್ಳಿ–ಧಾರವಾಡ | ೩೭.೩೨ (೦.೬೭) | ೩೭.೩೮ (೦.೭) | ೨೪೭.೦೧ (೦.೪) | ೧೧.೦೮ (೨.೭) | ೩೮.೫೯ (೩.೨) | – |
| ದಾವಣಗೆರೆ | ೩.೨೨ (೦.೨೪) | ೩.೨೩ (೦.೨೪) | ೨೩.೨೯ (೧.೭) | ೧.೩೭ (೧.೪) | ೫.೬೭ (೦.೫) | – |
| ಬೀದರ್ | ೧.೦೯ (೦.೨೬) | ೧.೧೮ (೦.೨೮) | ೧೫.೦೩ (೩.೫೫) | ೦.೯೧ (೩.೨) | ೨.೩೬ (೧.೭೨) | – |
| **ಎರಡನೆಯ ದರ್ಜೆ ನಗರಗಳು** | | | | | | |
| ಯಾದಗೀರ್ | ೦.೬೫ (೦.೫೫) | ೦.೬೭ (೦.೫೭) | – ೦.೮೦ | – ೦.೦೮ | ೩.೧೩ (೪.೨) | – |
| ಚಾಮರಾಜ ನಗರ | ೦.೩೯ (೦.೩೯) | ೦.೪೦ (೦.೪೦) | ೪.೦೫ (೩.೯೭) | ೦.೨೮ (೨.೭೯) | ೨.೬೩ (೩.೯) | ೧.೦೪ |
| ಶಿರಾ | ೦.೨೩ (೦.೧೮) | ೦.೨೪ (೦.೧೯) | ೨.೧೨ (೧.೬೩) | ೦.೭೯ (೧.೯) | ೧.೩೧ (೧.೫) | – |
| ಉಲ್ಲಾಳ | ೦.೦೧೯ (೦.೦೨) | ೦.೦೨ (೦.೦೨) | ೦.೦೩ (೦.೦೩) | ೦.೦೨ (೦.೦೮) | ೧.೧೧ (೩.೨೫) | – |
| **ಮೂರನೆಯ ದರ್ಜೆ ನಗರಗಳು** | | | | | | |
| ಬಂಗಾರಪೇಟೆ | ೦.೮೭೧ (೦.೮೭) | ೦.೮೭೨ (೦.೮೭) | ೬.೧೧ (೬.೧೧) | ೦.೨೧೩ (೩.೬೮) | ೨.೦೭ (೨.೫) | – |
| ಕೃಷ್ಣರಾಜ ನಗರ | ೧.೦೩೮ (೧.೦೬) | ೧.೦೪೮ (೧.೦೭) | ೪.೫೫ (೪.೬೫) | ೦.೨೦ (೨.೨೬) | ೧.೦೪ (೧.೪) | ೦.೦೯ |
| ಹಳಿಯಾಳ | ೦.೯೨ (೦.೨೬) | ೦.೦೯೪ (೦.೩೦) | ೧.೫೪ (೪.೮೬) | ೧೫೪ (೪.೮೬) | ೧.೨೬೮ (೩.೬) | – |
| ಸಕಲೇಶಪುರ | ೦.೦೮೬ (೦.೧೨) | ೦.೦೮೯ (೦.೧೩) | ೩.೦೬ (೪.೪) | ೨.೧೨೨ (೩.೯) | ೦.೩೨ (೧.೧) | ೦.೦೨ |
| ಲಿಂಗಸಗೂರು | ೦.೨೪ (೦.೩೬) | ೦.೨೪೧ (೦.೩೭) | ೧.೮೯ (೨.೮೭) | ೦.೬೧೬ (೨.೬೩) | ೧.೧೧ (೩.೧) | ೦.೨೦ |

ಎರಡನೆಯ ದರ್ಜೆಯ ನಗರಗಳಿಗೆ ಸಂಬಂಧಿಸಿದಂತೆ ಚಾಮರಾಜನಗರವು ಮೀಟರ್ ಅಳವಡಿಕೆಯಿಂದ ೪ ಪಟ್ಟು ಹೆಚ್ಚಿನ ಆದಾಯವನ್ನು ಗಳಿಸಬಹುದಾಗಿದೆಯಲ್ಲದೆ ಯಾದಗೀರ್ ನಗರವೂ ಸಹ ಇದೇ ಪ್ರಮಾಣದಲ್ಲಿ ಹೆಚ್ಚುವರಿ ಆದಾಯವನ್ನು ಗಳಿಸಬಹುದಾಗಿದೆ. ಉಲ್ಲಾಳ ನಗರದಲ್ಲಿ ಆಸ್ತಿ ತೆರಿಗೆ ಆದಾಯಕ್ಕಿಂತ ನೀರಿನಿಂದ ಬರುವ ಆದಾಯವೇ ಹೆಚ್ಚಾಗ ಬಹುದಾಗಿದ್ದು ಪ್ರಸ್ತುತದಲ್ಲಿ ಬರುವ ಆದಾಯಕ್ಕಿಂತ ೩.೨೫ ಪಟ್ಟು ಹೆಚ್ಚಾಗಿರುತ್ತದೆ. ಶಿರಾ ನಗರದ ಆದಾಯವು ೧.೫ ರಷ್ಟು ಹೆಚ್ಚಾಗುತ್ತದೆ. ಆದರೆ ಸಿರಾ ನಗರವು ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವುದರಿಂದ ನೀರಿನ ಮೀಟರ್ ಶುಲ್ಕವು ಎಷ್ಟರ ಮಟ್ಟಿಗೆ ಅನುಕೂಲವಾಗುತ್ತದೆ ಎಂಬುದು ಗೊತ್ತಿಲ್ಲ. ಮೊದಲನೆಯ ದರ್ಜೆಯ ನಗರಗಳಿಗೆ ಸಂಬಂಧಿಸಿದಂತೆ ಕೃಷ್ಣರಾಜನಗರವು ೧.೪ ರಷ್ಟು ಹೆಚ್ಚಿನ ಆದಾಯವನ್ನು ಮತ್ತು ಹಳಿಯಾಳ ನಗರವು ೩.೮ ರಷ್ಟು ಹೆಚ್ಚಿನ ಅನುದಾನವನ್ನು ನಿರೀಕ್ಷಿಸಬಹುದಾಗಿದೆ. ಲಿಂಗಸೂಗೂರು ನಗರವು ೩.೧ ಪಟ್ಟು ಹೆಚ್ಚಿನ ಆದಾಯವನ್ನು ಹಾಗೂ ಬಂಗಾರಪೇಟೆ ನಗರವು ೨.೫ ಪಟ್ಟು ಹೆಚ್ಚಿನ ಆದಾಯವನ್ನು ಗಳಿಸಬಹುದಾಗಿದೆ (ಪಟ್ಟಿ೧). ಒಟ್ಟಾರೆಯಾಗಿ ನೋಡುವುದಾದರೆ ಸಣ್ಣ ಯುಎಲ್‌ಬಿಗಳಿಗೆ ಆಸ್ತಿ ತೆರೆಗೆಗಿಂತ ಮೀಟರ್ ಅಳವಡಿಕೆಯಿಂದ ಹೆಚ್ಚಿನ ಆದಾಯವನ್ನು ಪಡೆಯುತ್ತವೆ.

## ನಗರ ಸಭೆಯು ಬಾಡಿಗೆಗೆ ಕೊಟ್ಟಿರುವ ಅಂಗಡಿಗಳಿಂದ ಬರುವ ಆದಾಯ

ಸಾಮಾನ್ಯವಾಗಿ ನಗರ ಸಭೆಗಳು ತಮ್ಮ ಅಂಗಡಿಗಳನ್ನು ಕಡಿಮೆ ಬಾಡಿಗೆಗೆ ಕೊಟ್ಟಿರುತ್ತವೆ. ಮಾರುಕಟ್ಟೆ ದರಕ್ಕೆ ಬಾಡಿಗೆ ಪಡೆದರೆ ನಗರ ಸಭೆಗಳು ಅದರಲ್ಲೂ ವಿಶೇಷವಾಗಿ ಸಣ್ಣ ನಗರ ಸಭೆಗಳು ಅನುಕೂಲ ಪಡೆಯುತ್ತವೆ. ನಗರ ಸಭೆಗಳು ಐಜಿಆರ್ ದರಗಳನ್ನು ಬಾಡಿಗೆಗೆ ಅನ್ವಯಿಸಿದರೆ ಒಳ್ಳೆಯ ಆದಾಯವನ್ನು ಪಡೆಯುತ್ತವೆ. ಆ ಪ್ರಕಾರ ಹುಬ್ಬಳ್ಳಿ–ಧಾರವಾಡವು ೧೧.೦೮ ಕೋಟಿ ರೂಗಳನ್ನು ಬೀದರ್ ನಗರವು ೦.೯೧ ಕೋತಿ ರೂಗಳನ್ನು ಪಡೆಯುತ್ತವೆ. ದಾವಣಗೆರೆಯು ಪ್ರತಿ ಅಂಗಡಿಗೆ ೧೪,೭೯ ರಿಂದ (ಈಗಿರುವ ದರ) ೨೦,೦೦೦ ರೂಗಳ ಬಾಡಿಗೆಯನ್ನು ವಿಧಿಸಬಹುದಾಗಿದೆ. ಎರಡನೆಯ ದರ್ಜೆ ನಗರಗಳು ಅಮ್ಗಡಿಗಳ ಬಾಡಿಗೆಯಿಂದ ಅತಿಹೆಚ್ಚಿನ ಆದಾಯ ಪಡೆಯಬಹುದಾಗಿದೆ (ಈಗಿನ ಆದಾಯಕ್ಕಿಂತ ೨.೭೯ ಪಟ್ಟು ಹೆಚ್ಚು). ಚಾಮರಾಜನಗರವು ನ್೦.೨೮ ಕೋಟಿ ರೂಗಳನ್ನು ಮತ್ತು ಶಿರಾ ನಗರವು ೦.೭೯ ಕೋಟಿ ರೂಗಳನ್ನು ಹೆಚ್ಚುವರಿಯಾಗಿ ಪಡೆಯಬಹುದಾಗಿದೆ. ಉಲ್ಲಾಳವು ೦.೦೨ ಕೋತಿ ರೂಗಳನ್ನು ಪಡೆಯುವ ಸಾಮರ್ಥ್ಯ ಹೊಂದಿದೆ. ಮೊದಲನೆಯ ದರ್ಜೆಯ ನಗರಗಳಿಗೆ ಸಂಬಂಧಿಸಿದಂತೆ ಸಕಲೇಶಪುರವು ೩.೯ ಪಟ್ಟು ಹೆಚ್ಚುವರಿಯಾಗಿ ಮತ್ತು ಕೃಷ್ಣರಾಜನಗರವು ೨.೨೬ ಪಟ್ಟು ಹೆಚ್ಚುವರಿಯಾಗಿ ಆದಾಯ ಪಡೆಯಬಹುದಾಗಿದೆ. ಇವುಗಳು ಪ್ರತಿ ಅಂಗಡಿಗೆ ೫,೩೪೭ ರೂಗಳನ್ನು ಪಡೆಯುತ್ತಿದ್ದು, ಇದನ್ನು ೧೨,೦೦೦ ರೂಗಳಿಗೆ ಏರಿಸಬಹುದಾಗಿದೆ (ಪಟ್ಟಿ ೧).

## ವ್ಯಾಪಾರ ಪರವಾನಿಗಿಯಿಂದ ಬರುವ ಆದಾಯ

ಎರಡನೆಯ ದರ್ಜೆಯ ನಗರಗಳಿಗೆ ಸಂಬಂಧಿಸಿದಂತೆ ಚಾಮರಾಜನಗರವು ವ್ಯಾಪಾರ ಪರವಾನಿಗೆ ಶುಲ್ಕದಿಂದ ೧.೦೪ ಕೋಟಿ ರೂಗಳನ್ನು ಗಳಿಸುವ ಸಾಮರ್ಥ್ಯ ಹೊಂದಿದೆ (ಹೆಚ್ಚಿನ ಅನಧಿಕೃತ ಮಳಿಗೆಗಳಿರುವುದರಿಂದ). ಮೂರನೆಯ ದರ್ಜೆಯ ನಗರಗಳಲ್ಲಿ, ಅದರಲ್ಲೂ ವಿಶೇಷವಾಗಿ, ಲಿಂಗಸಗೂರು ನಗರವು ೬.೨ ಕೋಟಿ ರೂಗಳನ್ನು ಗಳಿಸುವ ಸಾಮರ್ಥ್ಯ ಹೊಂದಿದೆ. ಏಕೆಂದರೆ ಈ ನಗರದಲ್ಲಿ ಹೆಚ್ಚಿನ ಅಂಗಡಿಗಳು ಕಾನೂನು ಬಾಹಿರವಾಗಿವೆ. ಇದೇ ರೀತಿಯಲ್ಲಿ ಅನಧಿಕೃತ ಮಳಿಗೆಗಳಿಂದಾಗಿ ಕೃಷ್ಣರಾಜ ನಗರವು ೦.೦೯ ಕೋಟಿ ರೂಗಳನ್ನು ಮತ್ತು ಸಕಲೇಶಪುರವು ೦.೦೨ ಕೋಟಿ ರೂಗಳನ್ನು ಹೆಚ್ಚುವರಿ ಆದಾಯವಾಗಿ ಪಡೆಯಬಹುದಾಗಿದೆ (ಪಟ್ಟಿ ೧).

## ಕಾರ್ಯನೀತಿ ಶಿಫಾರಸುಗಳು

೧. ಯುಎಲ್‌ಬಿಗಳ ಆಸ್ತಿ ತೆರಿಗೆ ಆದಾಯವನ್ನು ಹೆಚ್ಚಿಸುವ ಒಂದು ಕ್ರಮವಾಗಿ ತೆರಿಗೆ ಕಟ್ಟುತ್ತಿಲ್ಲದ, ಮೌಲ್ಯೀಕರಿಸಿಲ್ಲದ ವಾಸಸ್ಥಳಗಳ ಮತ್ತು ವಾಣಿಜ್ಯ ಸ್ವತ್ತುಗಳ ಮೂಲಕ ಆಧಾಯ ಪಡೆಯಬೇಕಾಗಿದೆ. ಏಕೆಂದರೆ ಯುಎಲ್‌ಬಿ ಗಳಿಗೆ ಆಸ್ತಿ ತೆರೆಗೆಯೇ ಬಹು ಮುಖ್ಯವಾಗಿರುತ್ತವೆ. ನಂತರದಲ್ಲಿ ಖಾಸಗಿ ಸ್ವತ್ತುಗಳ ಮೌಲ್ಯೀಕರವನ್ನು ರಾಜ್ಯದ ಐಜಿಆರ್ ಪ್ರಕಾರ ನಿಗಧಿಪಡಿಸಲು ಮಾರ್ಗಸೂಚಿ ದರಗಳನ್ನು ಪ್ರಕಟಿಸಬೇಕಾಗುತ್ತದೆ.

೨. ಅಧ್ಯಯನಕಾರರು ಗಮನಿಸಿದಂತೆ ಎಲ್ಲಾ ಯುಎಲ್‌ಬಿಗಳು ಸಹ ಆಸ್ತಿಗಳ ನಕ್ಷೆ ತಯಾರಿಸಲು ಜಿಐಎಸ್‌ನ್ನು ಬೆಳಸಿಕೊಳ್ಳುತ್ತಿವೆ. ಹೀಗಿದ್ದರೂ ಸಹ ಅನೇಕ ಅನಧಿಕೃತ ಕಟ್ಟಡಗಳು ಮತ್ತು ವಾಣಿಜ್ಯ ನಿರ್ಮಾಣಗಳು ತಲೆಯೆತ್ತುತ್ತಿವೆ. ಆದ್ದರಿಂದಲೇ ಅತಿ ತುರ್ತಾಗಿ ಮತ್ತೊಮೆ ಜಿಐಎಸ್‌ನ್ನು ಬಳಸಿಕೊಂಡು ಆಸ್ತಿಗಳ ಮೌಲ್ಯೀಕರಣ ಮಾಡಬೇಕಾಗಿದೆ. ನಿರ್ಮಾಣ ಕಾರ್ಯದಲ್ಲಿ ಮಾಡಿದ ಉಲ್ಲಂಘನೆಗಳನ್ನು ತೆರಿಗೆ ಜಾಲಕ್ಕೆ ತರಬೇಕಾಗುತ್ತದೆ. ಅನೇಕ ಅನಧಿಕೃತ ಸ್ವತ್ತುಗಳು ಗುರುತಿನ ಸಂಖ್ಯೆಗಳನ್ನು (ಪಿಐಡಿ) ಹೊಂದಿಲ್ಲ. ಇಂತಹ ಸ್ವತ್ತುಗಳು ಆಸ್ತಿ ತೆರೆಗಿಯಿಂದ ತಿರಸ್ಕೃತಗೊಳ್ಳುತ್ತವೆ. ಇದಕ್ಕಾಗಿಯೇ ಮತ್ತೊಮ್ಮೆ ಜಿಐಎಸ್ ಆಧಾರದ ಮರು ಮೌಲ್ಯೀಕರಣ ಆಗಬೇಕಾಗಿದೆ. ಹೀಗೆ ಮಾಡುವುದರಿಂದ ದಾಖಲೀಕರಣ, ಮಾಹಿತಿ ತಕ್ಷಣ ಸಿಗುವಿಕೆ, ಆಸ್ತಿ ಇರ್ದಿಷ್ಟತೆಗಳ ಅಧಿಕೃತತೆ ಇತ್ಯಾದಿಗಳಿಗೆ ನೆರವಾಗಲಿದೆ.

೩. ಯುಎಲ್‌ಬಿಗಳಲ್ಲಿ ಗಣಕೀಕರಣ ಆಗಬೇಕಾಗಿದೆ ಮತ್ತು ಮೂಲ ಸೌಕರ್ಯಗಳನ್ನು ಮತ್ತಷ್ಟು ಬಲಪಡೆಸಬೇಕಾಗಿದೆ. ಹೀಗೆ ಮಾಡುವುದರಿಂದ ಆದಾಯ ಗಳಿಕೆ ಕಾರ್ಯವಿಧಾನದಲ್ಲಿ ವೇಗ, ಪ್ರದರ್ಶಕತೆ, ಹೊಣೆಗಾರಿಕೆ, ಸಕಾಲಿಕತೆ, ಕೈಕೆಲಸ ತಗ್ಗುವಿಕೆ ಇತ್ಯಾದಿಗಳು ಉಂಟಾಗುತ್ತವೆ. ಜೊತೆಗೆ ಹೀಗೆ ಮಾಡುವುದರಿಂದ ಯುಎಲ್‌ಬಿಗಳ ಕಛೇರಿಗಳನ್ನು ಕಡತ ರಹಿತವನ್ನಾಗಿಸಬಹುದಾಗಿದೆ. ಪ್ರಸ್ತುತದಲ್ಲಿ ಈ ಕಛೇರಿಗಳಲ್ಲಿ ಕೈಕೆಲಸದ ಕಡತಗಳು ಮತ್ತು ಡಿಝಿಟಲ್ ಕಡತಗಳು ಇವೆರಡೂ ಇವೆ. ಉತ್ತಮ ಸಮಗ್ರೀಕರಣದಿಂದ ಮಾಹಿತಿಯು ಪುನರಾವರ್ತಿಸಲಾಗುವುದನ್ನು ತಪ್ಪಿಸಬಹುದಾಗಿದೆ.

೪. ನೀರು ಅತಿ ದುರ್ಲಬ ಸಂಪನ್ಮೂಲವಾಗಿದೆ. ಆದ್ದರಿಂದ ಮೀಟರ್ ಸಂಪರ್ಕವನ್ನು ಅಳವಡಿಸುವುದು ಮುಖ್ಯವಾಗಿದೆ. ಬಳಕೆದಾರರು ನೀರಿನ ಆರ್ಥಿಕ ಮೌಲ್ಯವನ್ನು ಅರಿತುಕೊಳ್ಳಬೇಕಾಗಿದೆ. ನೀರನ್ನು ಇಂತಿಷ್ಟೇ ಪ್ರಮಾಣದಲ್ಲಿ ನೀಡುವುದರಿಂದ ನಾಗರಿಕರಲ್ಲಿ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಬಹುದಲ್ಲದೆ ಆದಾಯವನ್ನು ಗಣನೀಯವಾಗಿ ಹೆಚ್ಚಿಸಬಹುದಾಗಿದೆ.

೫. ಯುಎಲ್‌ಬಿಗಳು ಬೀದಿ ವ್ಯಾಪಾರಿಗಳಿಂದಲೂ ಸಹ ವ್ಯಾಪಾರ ಪರವಾನಿಗಿ ಶುಲ್ಕವನ್ನು ಪಡೆಯಬೇಕಾಗಿ ಅಧ್ಯಯನಕಾರರು ಆಗ್ರಹ ಪಡಿಸುತ್ತಾರೆ. ಜೊತೆಗೆ ನಗರಸಭೆಗಳ ಆಸ್ತಿಯಿಂದ ಬಾಡಿಗೆ ಪಡೆಯುವಾಗ ಮಾರುಕಟ್ಟೆ ದರಗಳನ್ನು ಗಮನಿಸಿ ಬಾಡಿಗೆಯನ್ನು ಹೆಚ್ಚಿಸಬೇಕಾಗಿದೆ.

## ಪರಿಸಮಾಪ್ತಿ:

ಈ ಅಧ್ಯಯನದ ಮೂಲಕ ಶಿಫಾರಸು ಮಾಡಲಾಗುತ್ತಿರುವ ಕಾರ್ಯನೀತಿಗಳಿಂದ ಯುಎಲ್‌ಬಿಗಳ ಆರ್ಥಿಕತೆಯನ್ನು ಸುಸ್ಥಿರಗೊಳಿಸಬಹುದಾಗಿದೆ. ಏಕೆಂದರೆ ಅಧ್ಯಯನದಲಿ ಸೂಚಿಸಲಾಗಿರುವ ಅನೇಕ ಕ್ರಮಗಳು ಆಸ್ತಿ ತೆರೆಗೆಯನ್ನು ವಸೂಲು ಮಾಡುವಾಗ ಆಡಳಿತಶಾಹಿಯಲ್ಲಿ ಇರುವ ಅನೇಕ ನ್ಯೂನತೆಗಳನ್ನು ಸರಿಪಡಿಸುತ್ತವೆ. ಯುಎಲ್‌ಬಿಗಳ ಆದಾಯವನ್ನು ಹೆಚ್ಚಿಸಲು ಕಾನೂನಾತ್ಮಕವಾಗಿ ಇದುವರೆವಿಗೂ ಮೌಲ್ಯೀಕರಿಸಿಲ್ಲದೇ ಇರುವ ಮತ್ತು ತೆರಿಗೆ ಕಟ್ಟುತ್ತಿಲ್ಲದೇ ಇರುವ ಆಸ್ತಿಗಳಿಂದ ತೆರೆಗೆಯನ್ನು ವಸೂಲು ಮಾಡಬೇಕಾಗುತ್ತದೆ. ಐಜಿಆರ್ ದರಗಳನ್ನು ಒಂದು ಉದ್ದೇಶವಿಟ್ಟುಕೊಂಡು ಪ್ರಕಟಿಸಲಾಗಿರುತ್ತದೆ. ಆದ್ದರಿಂದ ಆಸ್ತಿಗಳ ಮೌಲ್ಯವನ್ನು ತೆರಿಗೆಗೆ ಅನ್ವಯಿಸುವಾಗ ಇದರ ಬಳಕೆಯಾಗಬೇಕು. ನೀರು ಅತಿ ದುರ್ಲಬ ಸಂಪನ್ಮೂಲವಾಗಿರುವುದರಿಂದ ಬಳಕೆದಾರರು ಇದರ ಆರ್ಥಿಕ ಮೌಲ್ಯವನ್ನು ಅರಿತುಕೊಳ್ಳಬೇಕು. ಮೇಲೆ ಹೇಳಿದ ರೀತಿಯಲ್ಲಿ ಯುಎಲ್‌ಬಿಗಳು ನೀರಿನ ಸಂಪರ್ಕಕ್ಕೆ ಮೀಟರ್‌ಗಳನ್ನು ಅಳವಡಿಸಬೇಕು ಮತ್ತು ನಿರ್ದಿಷ್ಟ ಪ್ರಮಾಣದ ನೀರನ್ನು ಒದಗಿಸಬೇಕು. ಪಟ್ಟಣಗಳಲ್ಲಿ ಅನಧಿಕೃತ ವ್ಯಾಪಾರ ನಡೆಸುವವರಿಂದ ವ್ಯಾಪಾರ ಪರವಾನಿಗೆ ಶುಲ್ಕವನ್ನು ಕಡ್ಡಾಯವಾಗಿ ವಸೂಲು ಮಾಡಬೇಕು. ಈ ಎಲ್ಲಾ ಕ್ರಮಗಳಿಂದಾಗಿ ಯುಎಲ್‌ಬಿಗಳು ರಾಜ್ಯಾಡಳಿತದ ಮೇಲಿನ ಅವಲಂಬನೆಯನು ತಗ್ಗಿಸಿಕೊಳ್ಳ ಬಹುದಾಗಿದೆಯಲ್ಲದೇ ಸ್ವಾವಲಂಬನೆಯನ್ನೂ ಗಳಿಸುವತ್ತ ಹೆಜ್ಜೆ ಹಾಕಬಹುದಾಗಿದೆ. ನಾಗರಿಕರಿಗೆ ಸಾಮಾನ್ಯ ಸೇವೆಗಳನ್ನು ಒದಗಿಸುವಲ್ಲಿ ಸುಧಾರಣೆಗಳನ್ನು ತರಲು ಯತ್ನಿಸಬಹುದಾಗಿದೆ.

## ಪರಾಮರ್ಶನೆ

ಭಾರತದ ಮಹಾನೋಂದಣಿ ಅಧಿಕಾರಿಗಳು (೨೦೧೧), ಭಾರತೀಯ ಜನಗಣತಿ, ನವ ದೆಹಲಿ: ಅರ್‌ಜಿಐ.

**ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆ,**
ಡಾ.ವಿಕೆಆರ್‌ವಿ ರಾವ್ ರಸ್ತೆ, ನಾಗರಬಾವಿ ಪೋಸ್ಟ್, ಬೆಂಗಳೂರು ೫೬೦ ೦೭೨.
ದೂರವಾಣಿ: ೨೩೨೧೫೪೬೮, ೨೩೨೧೫೫೧೯, ಫ್ಯಾಕ್ಸ್: +೯೧–೮೦–೨೩೨೧೭೦೦೮; ವೆಬ್: ಹೆಚ್‌ಟಿಟಿಪಿ:// ಡಬ್ಲ್ಯುಡಬ್ಲ್ಯುಡಬ್ಲ್ಯು.ಐಸೆಕ್.ಎಸ್.ಐಎನ್.